**CC 7555/2024**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 7555/2024

**ಸಿ ಡಬ್ಲೂ -1**

**ಪಿ ಡಬ್ಲೂ -1**

**ಸಾಕ್ಷಿಯ ಹೆಸರು -** **ಹನುಮಂತಪ್ಪ**
**ತಂದೆಯ ಹೆಸರು -** **ಹನುಮಂತಯ್ಯ**
**ವಯಸ್ಸು -** 60 **ವರ್ಷಗಳು**
**ಉದ್ಯೋಗ -** **ಖಾಸಗಿ ಕೆಲಸ**
**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 18-12-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನ್ನ ಮನೆ **21** ವಾರ್ಡ್‌ನ ಮಟಪತಿ ಒಣಿಯಲ್ಲಿ ಇರುತ್ತದೆ. ದಿಃ **09-06-2024** ರಂದು ರಾತ್ರಿ **10.30-11.00** ಗಂಟೆಗೆ ನಾನು ಮನೆಯಲ್ಲಿ ಮಲಗಿದ್ದೆ. ಮಧ್ಯರಾತ್ರಿ **1.00** ಗಂಟೆಗೆ ಶಬ್ದ ಕೇಳಿಬರುತ್ತಿತ್ತು. ನನ್ನ ಮನೆಯ ಮೇಲೆ ಇರುವ ನಮ್ಮದೇ ಮನೆಯಿಂದ ನನ್ನ ಮಗ ರಾಜು ಕರೆ ಮಾಡಿ ಯಾರೋ ತನ್ನ ರೂಮಿನ ಚಿಲಕವನ್ನು ಹಾಕಿರುತ್ತಾರೆ ಮತ್ತು ಶಬ್ದ ಬರುತ್ತಿದೆ ನೋಡಿ ಎಂದು ತಿಳಿಸಿದ. ನನ್ನ ಮಕ್ಕಳಾದ ಕಾರ್ತಿಕ ಮತ್ತು ರಂಗನಾಥ ರವರಿಗೆ ಮೇಲೆ ಹೋಗಿ ತಿಳಿಸಿದೆ. ನನ್ನ ಬಾಮೈದನ ಮಕ್ಕಳಾದ ಕಣಿಮೆಪ್ಪ ಮತ್ತು ಮಂಜುನಾಥ ಸಹ ಇನ್ನೊಂದು ಕಡೆಯಿಂದ ನಮ್ಮ ಮೇಲ್ಮಡಿಗೆ ಬಂದಿದ್ದರು. ನಮ್ಮ ಮನೆಗೆ ಕಳ್ಳತನ ಮಾಡಲು ಬಂದಿದ್ದ ವ್ಯಕ್ತಿ ನಮ್ಮ ಮನೆಯಿಂದ ಇನ್ನೊಂದು ಕಡೆಗೆ ಹೋಗಲು ಪ್ರಯತ್ನಿಸಿದಾಗ ಜಾರಿ ಕೆಳಗೆ ಬಿದ್ದಿರುತ್ತಾನೆ. ಸದರಿ ವ್ಯಕ್ತಿಯನ್ನು ನನ್ನ ಮಕ್ಕಳು ಮತ್ತು ನನ್ನ ಬಾಮೈದನ ಮಕ್ಕಳು ಹಿಡಿದಿರುತ್ತಾರೆ. ಸದರಿ ವ್ಯಕ್ತಿಯ ಬಳಿ ನನ್ನ ಸೊಸೆ ನಾಗರತ್ನ ರವರಿಗೆ ಸಂಬಂಧಿಸಿ **1** ಚೈನ್ ಮತ್ತು ಡಾನ್ ಬಾಸ್ಕೋ ಸಂಘಕ್ಕೆ

ಕಟ್ಟಬೇಕಿದ್ದ ರೂ. 10,000/- ಗಳು ಸಿಕ್ಕವು. ನಾವು ಹಿಡಿದಿದ್ದ ವ್ಯಕ್ತಿ ವಿಷ್ಣು ಎಂಬಾತನಿದ್ದ. ನಂತರ ಪೋಲಿಸರಿಗೆ ಕರೆ ವಮಾಡಿರುತ್ತೇವೆ. ನಮ್ಮ ಮನೆಯ ಎರಡು ಗಾಡ್ರೇಜ್ ಗಳನ್ನು ಮುರಿಯಲಾಗಿತ್ತು. ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಂತರ ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು 1 (ಎ) ಎಂದು ಗುರುತಿಸಲಾಯಿತು.

ಪೋಲಿಸರು ದಿಃ 10-06-2024 ರಂದು ಬೆಳಿಗ್ಗೆ 10.00 ಗಂಟೆಗೆ ಸ್ಥಳಕ್ಕೆ ಬಂದಿದ್ದರು. ಪೋಲಿಸರು ನಾನು ತೋರಿಸಿದ ಸ್ಥಳದಲ್ಲಿ ಚಾಸಾ -2 ಮತ್ತು 3 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ . ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು 2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು 2 (ಎ) ಎಂದು ಗುರುತಿಸಲಾಯಿತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3 (ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ 4 ಎಂದು ಗುರುತಿಸಲಾಯಿತು.

ಕಳ್ಳತನ ಆಗಿದ್ದ ಬಂಗಾರ ಮತ್ತು ಹಣವನ್ನು ನನ್ನ ವಶಕ್ಕೆ ಪಡೆದಿರುತ್ತೇನೆ. ಆಗ ಒಂದು ಬದ್ರತಾ ಪ್ರಮಾಣ ಪತ್ರವನ್ನು ಬರೆದುಕೊಟ್ಟಿರುತ್ತೇನೆ. ಸಾಕ್ಷಿ ಬದ್ರತಾ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು 5 (ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ **6** ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರುಗಳಿಲ್ಲ ಎಂದು ಆತನ ಪರ ವಕೀಲರು ತಿಳಿಸಿರುತ್ತಾರೆ.

## ಪಾಟೀ ಸವಾಲು ಆರೋಪಿ ಪರ ಶ್ರೀ ಬಿ. ಎಂ ವಕೀಲರಿಂದಃ

ಚಾಸಾ 6 ಮತ್ತು 7 ನನ್ನ ಬಾಮೈದನ ಮಕ್ಕಳು. ಚಾಸಾ 8 ಮತ್ತು 9 ನನ್ನ ಮಕ್ಕಳು. ಚಾಸಾ -10 ನನ್ನ ಸೊಸೆ. ಚಾಸಾ -2 ರಿಂದ 5 ನನಗೆ ಪರಿಚಯವರು ಅಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಒಣಿಯವರು ಎಂದು ನುಡಿಯುತ್ತಾರೆ. ಸದರಿಯವರ ಪರಿಚಯ ಸುಮಾರು 20 ವರ್ಷಗಳಿಂದ ಇರುತ್ತದೆ. ನಾವು ಒಂದೇ ಒಣಿಯಲ್ಲಿ ಇರುವುದರಿಂದ ನಮ್ಮ ಮನೆಗಳಲ್ಲಿ ಏನಾದರೂ ಆದರೇ ಒಬ್ಬರಿಗೊಬ್ಬರು ಸಹಕರಿಸುತ್ತೇವೆ ಅಂದರೆ ಸರಿ . ದೂರನ್ನು ನನ್ನ ಮಕ್ಕಳು ತಯಾರಿಸಿರುತ್ತಾರೆ. ದೂರಿನಲ್ಲಿ ಏನೇನೂ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ದೂರನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ.

ಪೋಲಿಸರಿಗೆ ನಮ್ಮ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿರುವುದಿಲ್ಲ. ಆರೋಪಿ ಯಾರ ಮನೆಯ ಮುಂದೆ ಜಾರಿ ಬಿದ್ದಿದ್ದ ಎಂದು ದೂರಿನಲ್ಲಿ ಬರೆಸಿರುವುದಿಲ್ಲ. ಮುರಿದಿದ್ದವು ಎನ್ನಲಾದ ಗಾಡ್ರೆಜ್ ಗಳ ಕೀಲಿಗಳನ್ನು ಪೋಲಿಸರಿಗೆ ನಾನು ಕೊಟ್ಟಿಲ್ಲ. ಬಂಗಾರದ ಚೈನ್ ಯಾವ ಡಿಸೈನ್ ಮತ್ತು ಎಷ್ಟು ಉದ್ದದ್ದು ಇತ್ತು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ . ಸದರಿ ಚೈನ್ ಅನ್ನು

ಯಾವ ಅಂಗಡಿಯಿಂದ ಖರೀದಿಸಲಾಗಿತ್ತು ಎಂದು ತೋರಿಸಲು ಅದರ ಬಿಲ್ ಅನ್ನು ಪೋಲಿಸರಿಗೆ ನೀಡಿಲ್ಲ ಅಂದರೆ ಸರಿ.

ಡಾನ್ ಬಾಸ್ಕೋ ಸಂಘದಲ್ಲಿ ನಮ್ಮ ಕುಟುಂಬದ ಯಾವ ವ್ಯಕ್ತಿ ಸಾಲ ಪಡೆದಿರುತ್ತಾರೆ ಮತ್ತು ಯಾರು ಸದರಿ ಸಾಲವನ್ನು ಹಿಂತಿರುಗಿಸುತ್ತಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ನಾನು ಪೋಲಿಸರಿಗೆ ನೀಡಿಲ್ಲ ಅಂದರೆ ಸರಿ. ರೂ. 10,000/- ಗಳಲ್ಲಿ ಎಷ್ಟು ಮುಖಬೆಲೆಯ ಎಷ್ಟು ನೋಟುಗಳು ಇದ್ದವು ಅಂದರೆ ಸರಿ. ಆ ಬಗ್ಗೆ ದೂರಿನಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಅಂದರೆ ಸರಿ. ಪೋಲಿಸರಿಗೆ ಯಾವ ನಂಬರ್ ನಿಂದ ಕರೆ ಮಾಡಿದ್ದೆವು ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಬರೆಯಲು ಯಾರು ಮಾಹಿತಿ ನೀಡಿದರು ಮತ್ತು ಅದನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ನನ್ನ ಸಮಕ್ಷಮ ನಮ್ಮ ಅಕ್ಕಪಕ್ಕ ಮನೆಯವರ ಹೇಳಿಕೆಗಳನ್ನು ಪೋಲಿಸರು ಪಡೆದಿರುವುದಿಲ್ಲ. ನಾನು ಅಕ್ಕಪಕ್ಕದವರ ಮನೆಯವರನ್ನು ಠಾಣೆಗೆ ಕರೆದುಕೊಂಡು ಹೋಗಿ ಹೇಳಿಕೆ ಕೊಡಿಸಿಲ್ಲ ಅಂದರೆ ಸರಿ .

ಆ ದಿನ ಯಾವುದೇ ಕಳ್ಳತನ ಆಗಿಲ್ಲ, ಕಳ್ಳನನನ್ನು ನಾವು ಹಿಡಿದಿರಿಲಿಲ್ಲ ಅಂದರೆ ಸರಿಯಲ್ಲ. ನಮ್ಮ ಕಳೆದು ಹೋದ ಆಭರಣ ಸಿಕಿಕ್ಕಿದೇ ಎಂದು ಪೋಲಿಸರ ಮಾತು ಕೇಳಿ ಯಾವುದೇ ಕೃತ್ಯ ಎಸಗದ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಯ ಹತ್ತಿರ ಬಂದು ಕಳ್ಳತನ ಮಾಡಿಲ್ಲ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಆಗಿಲ್ಲ ಅಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಕಚ್ಚಾ ನಕಾಶೆ ತಯಾರಿಸಿಲ್ಲ ಅಂದರೆ

ಸರಿಯಲ್ಲ. ಪೋಲಿಸರು ಯಾವ ಕ್ಯಾಮೇರಾದಿಂದ ಪೋಟೋ ತೆಗೆದಿರುತ್ತಾರೆ ಎಂದು ಮಾಹಿತಿ ಇಲ್ಲ ಅಂದರೆ ಸರಿ .

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.